"ನಾಟಕ ಮಾಡ್ಬೇಡ್ವೋ ತಮ್ಮಾ. ಹೀಗೆ ಊರಿಂದೂರಿಗೆ ಬರೋರೇ ಪ್ರಸಾದ ತಂದು ಹಂಚೋದು. ನಾವೇ ಕೈಯಾರೆ ನಮ್ಮ ಗುಂಡಿ ತೋಡ್ಕಂಬೇಕು ಅಂತೀಯಾ?"

"ಗದ್ದೇಲಿ ಪ್ರತ್ಯೇಕ ಇರ್ತಾರೆ ಅಂತ ಹೇಳಿದ್ನಲ್ಲ, ಇದೇ ಊರಿನ ಮಗ. ಅಷ್ಟು ಕಟ್ಟುಪಾಡು ಮಾಡಿದ್ರೆ ಎಲ್ಲಿಗೆ ಹೋಗ್ಬೇಕು?"

ಅಣ್ಣ ಪರಿಪರಿಯಾಗಿ ಮನವರಿಕೆ ಮಾಡಿಕೊಟ್ಟ ಮೇಲೆ ಗುಂಪು ಅರೆಮನಸ್ಸಿನ ಸಮ್ಮತಿ ಸೂಚಿಸಿತು, ಕೆಲವೊಂದು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಆದೇಶದೊಂದಿಗೆ. ನೋಡನೋಡುತ್ತಿದ್ದಂತೆ ರಸ್ತೆ ತೆರವಾಯಿತು. ವ್ಯಾನು ಮುಂದೆ ಹೊರಟಿತು. ರಾಜೀವ ಕಣ್ಣುಗಳಲ್ಲೇ ಅಣ್ಣನಿಗೆ ಕೃತಜ್ಞತೆ ಹೇಳಿದ.

★★★

ಗದ್ದೆಯ ಬದಿಯಲ್ಲಿ, ಜನಸಂಚಾರ ಇರದಲ್ಲಿ, ಪ್ರತ್ಯೇಕ ಬಿಡಾರ ತತ್ಕಾಲಕ್ಕೆ ಸಂಸಾರ ಹೂಡಲು ಸಿದ್ಧವಾಗಿತ್ತು. ಹಿಂದೆ ಆಳುಮಗನೊಬ್ಬ ನೆಲೆಸಿದ್ದ ಜಾಗ. ಅವನೂ ಬಿಟ್ಟು ಹೋದ ಮೇಲೆ ಹಾಳು ಬಿದ್ದಿದ್ದಕ್ಕೆ ಸೋಗೆ ಹೊಚ್ಚಿಸಿ, ನೆಲಕ್ಕೆ ಸಗಣಿ ಸಾರಿಸಿ, ಸಿದ್ಧಪಡಿಸಿದ್ದ ಅಣ್ಣ.

ರಸ್ತೆಬದಿಯಲ್ಲಿ ಸಾಮಾನು ಇಳಿಸಿ ಬಾಡಿಗೆ ಎಣಿಸಿಕೊಂಡು ವ್ಯಾನು ಹೊರಟು ಹೋದ ಮೇಲೆ ಗಂಡಹೆಂಡಿರು ಹೊಸ ಬಿಡಾರಕ್ಕೆ ಸಾಮಾನು ಹೊತ್ತು ಹೊತ್ತು ದಣಿದರು. ಯಾರೂ ಸಹಾಯಕ್ಕೆ ಬರುವವರಿಲ್ಲ, ಮಾತ್ರವಲ್ಲ 'ಇದ್ದೆಯಾ, ಸತ್ತೆಯಾ...' ಎಂದು ಕೇಳುವವರಿಲ್ಲ. ತಾನು ಹುಟ್ಟಿ ಬೆಳೆದ ತನ್ನದೇ ಸ್ವಂತ ನೆಲದಲ್ಲಿ ಹೀಗೆ ಪರದೇಶಿಯಂತೆ ಇರಬೇಕಾದ ಪರಿಸ್ಥಿತಿ ನೆನೆದು ರಾಜೀವ ಕುಗ್ಗಿ ಹೋಗಿದ್ದ. ಮನೆಯ ತಣ್ಣೆಳಲು, ಅಮ್ಮನ ವಾತ್ಸಲ್ಯ, ಅಣ್ಣನ ಪ್ರೀತಿ ಎಲ್ಲಾ ಸದ್ಯಕ್ಕೆ ಕನಸಿನ ಗಂಟು. ಜೀವದ ಮುಂದೆ ಸಂಬಂಧ, ಸ್ನೇಹಗಳೆಲ್ಲಾ ತೃಣಸಮಾನ. 'ಅಣ್ಣನೇ ಆಗಿದ್ದರೆ ಮನೆ ಸೇರಿಸಿಕೊಳ್ಳುತ್ತಿದ್ದನಾ?' ಎನ್ನುವ ಪ್ರಶ್ನೆ ಅಂತರಂಗವನ್ನು ಕೊರೆಯುತ್ತಿದೆ. ಬಹುಶಃ ಇಲ್ಲ. ಅವನಿಗೂ ಸಂಸಾರ ಇದೆ. ಇಬ್ಬರು ಸಣ್ಣ ಮಕ್ಕಳಿದ್ದಾರೆ. ಮತ್ತು ಅವನಿಗೂ ಎಲ್ಲರಂತೆ ಜೀವಭಯ ಇದ್ದೇ ಇರುತ್ತದೆ. ಹಾಗಾಗಿಯೇ ತಮಗಾಗಿ ಮೊದಲೇ ಸಿದ್ಧಗೊಂಡಿದೆ ಪ್ರತ್ಯೇಕ ಬಿಡಾರ. ಮುನ್ನೆಚ್ಚರಿಕೆಯ ಕ್ರಮ. ಅಥವಾ ಹೀಗಾಗಬಹುದೆಂದೇ ಅಣ್ಣ ಈ ಸಿದ್ಧತೆ ಮಾಡಿಟ್ಟಿದ್ದನೇ?

ಅಗತ್ಯವೆನ್ನಿಸಿದ್ದನ್ನು ತಂದು ಶೇಖರಿಸಿಟ್ಟಿದ್ದ ಅಣ್ಣ. ಹಸಿವಿನಿಂದ ರಾಗ ತೆಗೆದಿದ್ದ ಸಮೀರ. ಮೂಲೆಯಲ್ಲಿದ್ದ ಸೌದೆಯ ತುಂಡುಗಳನ್ನು ಒಲೆಗೆ ಒಟ್ಟಿ ಸೌದೆ ಉರಿಸಿದಳು ನರ್ಮದಾ. ಅಭ್ಯಾಸ ತಪ್ಪಿ ಹೋಗಿದ್ದ ಕೆಲಸ. ಕಣ್ಣುರಿ. ಹೊಗೆ. ತಪ್ಪಲೆಯಲ್ಲಿ ಕುದಿಯಿತು ಗಂಜಿ. ಸದ್ದುಗದ್ದಲಕ್ಕೆ ಒಗ್ಗಿ ಹೋಗಿದ್ದ ಹುಡುಗ ಸುತ್ತಲಿನ ವಿಚಿತ್ರ ನೀರವತೆಯಿಂದ ಅಸ್ವಸ್ಥನಾಗಿದ್ದ. ರಗಳೆ ಮಾಡುತ್ತಿದ್ದ. "ಹೊಡೀಬಾರ್ದು ನೀವು..." ಸಾರಿ ಸಾರಿ ಹೇಳಿದ್ದಳು ನರ್ಮದಾ. ಗಂಜಿ ಬೇಯುವವರೆಗೆ ಮಗನನ್ನೆತ್ತಿಕೊಂಡು ಹೊರಗೆ ಸುತ್ತಾಡಿಸಿಕೊಂಡು ಬರಲು ಕರೆದುಕೊಂಡು ಹೋದ ರಾಜೀವ. ಕಣ್ಣೆದುರು ಹರಡಿಕೊಂಡಿದೆ ಭತ್ತ ಬೆಳೆಯುವುದಕ್ಕಿಂತಾ ಅಕ್ಕಿ ಕೊಳ್ಳುವುದೇ ಲಾಭ ಎನ್ನುವ ಲೆಕ್ಕಾಚಾರದಲ್ಲಿ ನಿರ್ಲಕ್ಷಿಸಿದ ಗದ್ದೆಯ ತುಂಡು. ತರಕಾರಿ ಬೆಳೆದರೆ ಕೈ ಹತ್ತುವುದು ಕನಸಿನ ಮಾತು. ಹಗಲಲ್ಲಿ ಮಂಗಗಳ ಕಾಟ. ರಾತ್ರಿ ಹೊತ್ತು ಸನಿಹದ ಕಾನಿನಿಂದ ಆಹಾರ ಅರಸಿ ಬರುವ ಕಾಡುಹಂದಿಗಳು, ಕಡವೆಗಳು, ಮೊಲಗಳಂತಾ ವನ್ಯಜೀವಿಗಳು. ಹೆಸರಿಗೆ ತಮ್ಮದಾಗಿದ್ದರೂ ಮುಂದೆ ತೋಟ ಎಬ್ಬಿಸುವ ಯೋಜನೆಯಲ್ಲಿ ಸದ್ಯಕ್ಕಂತೂ ಮೂರುಕಾಸಿನ ಪ್ರಯೋಜನವಿಲ್ಲದಿದ್ದ ಭೂಮಿ.

ಗಂಜಿಯೂಟ ಮುಗಿಸಿ, ಮೂಲೆಯಲ್ಲಿದ್ದ ಜಮಖಾನ ಬಿಡಿಸಿ, ಮೈಚಾಚಿ ಮಲಗಿಕೊಂಡಿತು ಸಂಸಾರ. ಬೆನ್ನಿನಡಿಯಲ್ಲಿ ಒತ್ತುತ್ತಿರುವ ಏರುತಗ್ಗಿನ ನೆಲ. ಮಣ್ಣಿನ ನೆಲದ ಮೇಲೆ ಸಾರಿಸಿದ ಸಗಣಿಯ ವಾಸನೆ ಇನ್ನೂ ಬಿಡಾರದೊಳಗೆ ಸುರುಳಿ ಸುತ್ತಿಕೊಂಡಿದೆ. ನೆಪಕ್ಕೆ ಒಂದು ಬಿದಿರು ತಡಿಕೆಯ ಬಾಗಿಲು.